ಶ್ರೀ ಮಹಾಲಕ್ಷ್ಮೀ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಹಂದಿಗುಂದ

ತಾ॥ ರಾಯಬಾಗ ಜಿ॥ ಬೆಳಗಾವಿ

ಸಿಬ್ಬಂದಿಗಳು ಬೇಕಾಗಿದ್ದಾರೆ

ಸಂಘದಲ್ಲಿ ಈ ಕೆಳಗೆ ಕಾಣಿಸಿದ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಅ. ನಂ.	ಹುದ್ದೆ ಹೆಸರು	ಹುದ್ದೆ ಸಂಖ್ಯೆ	ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳು	ವೇತನ ಶ್ರೇಣಿ (ರೂ)
1	ಕ್ಲರ್ಕ	02	ಎ) ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ಯಾವುದೇ ವಿಶ್ವವಿದ್ಯಾನಿಲಯದ ಪದವಿಯಲ್ಲಿ ಪಾಸಾಗಿರಬೇಕು ಬಿ) ಕನ್ನಡ ಓದಲು ಬರೆಯಲು ಮಾತನಾಡಲು ಹಾಗೂ ತಿಳಿದುಕೊಳ್ಳಲು ಬರಬೇಕು. ಹಾಗೂ ಅಭ್ಯರ್ಥಿಗೆ ಇಂಗ್ಲೀಷ ಬರೆಯಲು, ಓದಲು ತಿಳಿದುಕೊಳ್ಳಲು, ಮಾತನಾಡಲು ಬರಬೇಕು. ಸಿ) ಗಣಕಯಂತ್ರದ ಕಾರ್ಯಾಚರಣೆಯ ಪೂರ್ಣ ಜ್ಞಾನ ಹೊಂದಿರಬೇಕು. ಡಿ) ಬ್ಯಾಂಕಿಂಗ ಕ್ಷೇತ್ರದಲ್ಲಿ/ಸಹಕಾರ ಪತ್ತಿನ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು	21400-42000
2	ಅಟೆಂಡರ	03	ಎ) ಭಾಷೆಗಳಲ್ಲಿ ಒಂದು ಕನ್ನಡ ಭಾಷೆಯೊಂದಿಗೆ ಎಸ್.ಎಸ್.ಎಲ್.ಸಿ ಯಲ್ಲಿ ಪಾಸ ಆಗಿರಬೇಕು. ಬಿ) ದ್ವಿತೀಯ ಪಿ.ಯು.ಸಿ. ಪಾಸಾದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.	18600-32600

- ಸಂಘದಲ್ಲಿ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಶುಟ್ಪಭತ್ತೆ ಮತ್ತು ಇತರ ಭತ್ತೆಗಳನ್ನು ನೀಡಲಾಗುವುದು.
- <u>ಅಭ್ಯರ್ಥಿಯ ವಯೋಮಿತಿ:</u> ಅಭ್ಯರ್ಥಿಗೆ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳಾಗಿರಬೇಕು. ಹಾಗೂ ಕರ್ನಾಟಕ ರಾಜ್ಯ ಸರಕಾರದ ರೀತಿ ಈ ಕೆಳಕಂಡ ಗರಿಷ್ಠ ವಯೋಮಿತಿಗೊಳಪಟ್ಟಿರಬೇಕು.
  ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಪ್ರವರ್ಗ-I ಅಭ್ಯರ್ಥಿಗಳಿಗೆ 18 ರಿಂದ 40 ವರ್ಷ
  ಆ) ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 18 ರಿಂದ 38 ವರ್ಷ
  ಇ) ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 18 ರಿಂದ 35 ವರ್ಷ
  ಸೂಚನೆ: ಘನ ಕರ್ನಾಟಕ ರಾಜ್ಯ ಸರಕಾರದ ಆದೇಶ ಸಂಖ್ಯೆ: ಸಿಆಸುಇ/262/ಸೇನೆನಿ/2025 ದಿನಾಂಕ: 29-01-2026 ಪ್ರಕಾರ ಎಲ್ಲ ವರ್ಗದ ಅರ್ಜಿದಾರರಿಗೆ ವಯೋಮಿತಿಯಲ್ಲಿ 5 ವರ್ಷಗಳ ವಿನಾಯಿತಿಯನ್ನು ನೀಡಲಾಗಿದೆ.
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ ಮತ್ತು ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಇತ್ತೀಚಿನ ಘನ ಸರಕಾರದ ಆದೇಶದಂತೆ ಅವಧಿಯೊಳಗಿನ ದೃಢೀಕೃತ ಜಾತಿ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು.
- ಅರ್ಜಿ ಶುಲ್ಕ : ಗುಮಾಸ್ತ ಹುದ್ದೆಗೆ ರೂ.1000.00 ಹಾಗೂ ಸಿಪಾಯಿ ಹುದ್ದೆಗೆ ರೂ.500.00 ಅರ್ಜಿ ಶುಲ್ಕವನ್ನು ನೇರವಾಗಿ ಪ್ರಧಾನ ಕಛೇರಿ ಹಂದಿಗುಂದದಲ್ಲಿ ತುಂಬಬಹುದು ಇಲ್ಲವೆ ಡಿ.ಡಿ./ಪೋಸ್ಟಲ್ ಆರ್ಡರನ್ನು ಶ್ರೀ ಮಹಾಲಕ್ಷ್ಮೀ ಕೋಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಹಂದಿಗುಂದ ಈ ಹೆಸರಿನಲ್ಲಿ ನೀಡಬೇಕು. (ಪ.ಜಾತಿ/ಪ.ಪಂ./ಪ್ರವರ್ಗ-I, ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ಶೇ.50 ರಿಯಾಯಿತಿ ಇರುತ್ತದೆ)

❖ **ಇತರೇ ಸೂಚನೆಗಳು:**

- **ಕ್ಲರ್ಕ** ಹುದ್ದೆಗಳ ನೇಮಕಾತಿಗೆ ಲಿಖಿತ ಪರೀಕ್ಷೆಯನ್ನು ಜರುಗಿಸಲಾಗುವುದು ಹಾಗೂ ಈ ರೀತಿ ಲಿಖಿತ ಪರೀಕ್ಷೆಯಲ್ಲಿ ಅಥವಾ ತಾಂತ್ರಿಕ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಶೇಕಡಾವಾರು ಆಧಾರದ ಮೇಲೆ 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವದು.
- <u>ಅಟೆಂಡರ</u> ಹುದ್ದೆಯ ನೇಮಕಾತಿಗೆ ಸಂದರ್ಶನ ಜರುಗಿಸಲಾಗುವುದು. ಹುದ್ದೆಗೆ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯಲ್ಲಿ ಪಡೆದುಕೊಂಡ ಪ್ರತಿಶತ ಅಂಕಗಳ ಆಧಾರದ ಮೇಲೆ 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವದು. ಆವಶ್ಯವೆನಿಸಿದ್ದಲ್ಲಿ ಲಿಖಿತ ಪರೀಕ್ಷೆ ಜರುಗಿಸಿ ಸಂದರ್ಶನ ಜರುಗಿಸಲಾಗುವುದು.
- ನೇಮಕಾತಿ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳನ್ನು ಮಾತ್ರ ಲಿಖಿತ ಪರೀಕ್ಷೆ ಅಥವಾ ಸಂದರ್ಶನಕ್ಕೆ ಕರೆಯಲಾಗುವುದು.
- 200 ಅಂಕಗಳ ಲಿಖಿತ ಪರೀಕ್ಷೆಯಿದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲೀಷಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಗಳಿಗಾಗಿ 50 ಅಂಕಗಳು, ಭಾರತದ ಸಂವಿಧಾನಕ್ಕಾಗಿ 25 ಅಂಕಗಳು ಹಾಗೂ ಬ್ಯಾಂಕಿನ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯ ವಸ್ತುಗಳಿಗೆ 25 ಅಂಕಗಳು ಒಳಗೊಂಡಿರುತ್ತದೆ.
- ಅಪೂರ್ಣ, ಸ್ಪಷ್ಟವಾಗಿ ಬರೆಯದ, ಸಹಿ ಮಾಡದೇ ಇರುವ, ಶುಲ್ಕವನ್ನು ಪಾವತಿಸದ, ಅವಶ್ಯಕ ದೃಢೀಕೃತ ದಾಖಲಾತಿಗಳನ್ನು ಲಗತ್ತಿಸಿದ ಹಾಗೂ ಎಲ್ಲ ದಾಖಲಾತಿಗಳನ್ನು ದೃಢೀಕರಿಸದೇ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿದ ಅವಧಿಯ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಕಾರಣವನ್ನು ನೀಡದೇ ಮುಂದೂಡುವ, ರದ್ದುಪಡಿಸುವ, ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ನೇಮಕಾತಿ ಸಮಿತಿ ಅಥವಾ ಆಡಳಿತ ಮಂಡಳ ಕಾಯ್ದಿರಿಸಿಕೊಂಡಿದೆ.
- ಅರ್ಹತೆ ಹೊಂದಿಲು ವಿಫಲವಾದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಗೆ/ಸಂದರ್ಶನಕ್ಕೆ ಕರೆ ಅಥವಾ ಸೂಚನೆ ನೀಡಲಾಗುವುದಿಲ್ಲ. ಅನರ್ಹತೆ ಹೊಂದಿದ ಅಭ್ಯರ್ಥಿಗಳ ಜೊತೆ ಈ ಕುರಿತು ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.
- ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಯನ್ನು ಸಂಪೂರ್ಣ ದಾಖಲಾತಿಗಳನ್ನು ಲಗತ್ತಿಸಿ ಮುಖ್ಯಕಾರ್ಯನಿರ್ವಾಹಕರು ಶ್ರೀ ಮಹಾಲಕ್ಷ್ಮೀ ಕೋಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಹಂದಿಗುಂದ ಇವರ ಹೆಸರಿಗೆ ಕಛೇರಿಯ ಕೆಲಸದ ಅವಧಿಯಲ್ಲಿ ಸಲ್ಲಿಸಬೇಕು.

ಅರ್ಜಿಯನ್ನು ಸ್ವೀಕರಿಸುವ ಪ್ರಾರಂಭದ ದಿನಾಂಕ: 18-05-2026 ಹಾಗೂ ಕೊನೆಯ ದಿನಾಂಕ : 02-06-2026 ಇರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ನಿಯಮಗಳು 1960 ರನ್ವಯ ನೇಮಕಾತಿ ಮಾಡಲಾಗುವುದು. ಅರ್ಜಿ ಫಾರ್ಮಗಳನ್ನು ಪ್ರಧಾನ ಕಛೇರಿ ಹಂದಿಗುಂದದಲ್ಲಿ ಸಂಘದ ವ್ಯವಹಾರದ ಸಮಯದಲ್ಲಿ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಸಂಘದ ಪ್ರಧಾನ ಕಛೇರಿಗೆ ಸಂಪರ್ಕಿಸಿ.

ಸಹಿ/- ಮುಖ್ಯಕಾರ್ಯನಿರ್ವಾಹಕರು,
ಶ್ರೀ ಮಹಾಲಕ್ಷ್ಮೀ ಕೋಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಹಂದಿಗುಂದ

ಸ್ಥಳ: ಹಂದಿಗುಂದ
ದಿನಾಂಕ: 16-05-2026